ನೋಡಿಯೇ ನಾವು ಕಂಡುಹಿಡಿಯಬಹುದು. ಒಬ್ಬ ಕವಿಯಾಗಿ ನಾನು ಈ ವಿಚಾರಕ್ಕೆ ಪ್ರಾಮುಖ್ಯತೆ ಕೊಡುತ್ತೇನೆ.

ಕವಿಯ ಅಭಿವ್ಯಕ್ತಿ ಶೈಲಿ ಮತ್ತು ಕಾವ್ಯದ ಆಕೃತಿಯು ಕಾಲದಿಂದ ಕಾಲಕ್ಕೆ ಬದಲಾವಣೆಗೊಳ್ಳಬಹುದು. ಇವೆಲ್ಲವೂ ಕವಿತೆಯ ವಸ್ತುವನ್ನೂ, ಕವಿತೆ ರಚನೆಯಾಗುವ ಕಾಲದ ಇತರೆ ಸಂಗತಿಗಳನ್ನೂ ಆಧರಿಸಿದೆ. ಮೇಲಾಗಿ, ವಿಚಾರಗಳು, ಸೂಕ್ಷ್ಮತೆ, ಅನುಭವಗಳು, ವಸ್ತುವಿನ ಆಯ್ಕೆಯಲ್ಲಿ ಹೇಗೆ ವ್ಯತ್ಯಾಸಗಳನ್ನು ಗುರುತಿಸಬಹುದೋ, ಅದೇ ರೀತಿ ಅಭಿವ್ಯಕ್ತಿ ಶೈಲಿಯಲ್ಲಿಯೂ ವ್ಯತ್ಯಾಸಗಳು ಸ್ಪಷ್ಟವಾಗಿರುತ್ತವೆ. ನನ್ನ ವಿಷಯಕ್ಕೂ ಇದು ಅನ್ವಯಿಸುತ್ತದೆ.

◆ **ಅಸ್ಸಾಮಿನಲ್ಲಿ ಜರುಗಿದ ಹಲ ಬಗೆಯ ದಂಗೆಗಳು... ಅಂದರೆ, ಬಂಗಾಳ, ಬಾಂಗ್ಲಾದೇಶ, ಬುಡಕಟ್ಟುಗಳ ತಳಮಳ ಇತ್ಯಾದಿಗಳ ಬಗ್ಗೆ ಏನಾದರೂ ಹೇಳಬಹುದೆ? ಇದನ್ನೇ ಸ್ವಲ್ಪ ವಿಸ್ತರಿಸಿ ಕೇಳುತ್ತೇನೆ: ನಿಮ್ಮದೊಂದು ಕವಿತೆಯಿದೆ, 'ಅತಿಥಿ' ಅಂತ ಅದರ ಹೆಸರು. ಆ ಕವಿತೆ ಹೇಳುವಂತೆ, ನಿನ್ನ 'ವಿಳಾಸ' ಅಂದರೆ ಅದು ಕೇವಲ ನಿನ್ನ ಹೆಸರಲ್ಲ, ಮನೆ ಸಂಖ್ಯೆಯಲ್ಲ ಅಥವಾ ರಸ್ತೆಯಲ್ಲ. ನಿನ್ನ 'ವಿಳಾಸ'ವೆಂಬುದು ನಿನ್ನ ಜನ, ನಿನ್ನ ಸಮುದಾಯ, ನೋವು ತುಂಬಿದ ಇತಿಹಾಸದ ಗಾಯ ಗುರುತುಗಳು, ಅವರ ನಂಬಿಕೆಗಳು, ಆತಿಥ್ಯ ಇತ್ಯಾದಿ. ಮತ್ತು ಇದೇ ನಿನ್ನ 'ಗುರುತು' ಕೂಡ. ಈ 'ಕಥನ'ದ ಕುರಿತು ಹೇಳಿ.**

ಹೌದು... ನನ್ನ ರಾಜ್ಯ ಅಸ್ಸಾಂನ ಅತ್ಯಂತ ಕ್ಷೋಭೆಯ ಕಾಲಘಟ್ಟದಲ್ಲಿ ಹಲವು ಸುಡುಸಂಗತಿಗಳನ್ನು ಅತ್ಯಂತ ಹತ್ತಿರದಿಂದ ನಾನು ಕಂಡಿದ್ದೇನೆ. ಅಕ್ರಮ ವಲಸೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ನಡೆದ ಆರು ವರ್ಷಗಳ ದೀರ್ಘ 'ಅಸ್ಸಾಂ ಚಳವಳಿ', ಅನಂತರದ ದಿನಗಳ ಪರಿಣಾಮಗಳು, ಸ್ವ-ಆಳ್ವಿಕೆಯ ಪರವಾದ ಜನಾಂಗಿಕ ಗುಂಪುಗಳ ಅಸಮಾಧಾನ, ಸ್ವತಂತ್ರ ಸಾರ್ವಭೌಮ ದೇಶಕ್ಕಾಗಿ ಯುಎಲ್ಎಫ್ಎ (ಯುನೈಟೆಡ್ ಲಿಬರೇಷನ್ ಫ್ರಂಟ್ ಆಫ್ ಅಸ್ಸಾಮ್) ನಡೆಸಿದ ರಕ್ತಚೆಲ್ಲಾಟದ ಹೋರಾಟ... ಇವೆಲ್ಲವುಗಳನ್ನೂ ನಾನು ನೋಡಿದ್ದೇನೆ, ಅನುಭವಿಸಿದ್ದೇನೆ. ನಾನು ಮತ್ತು ನನ್ನಂತಹ ಎಳೆಯ ಮನಸ್ಸು, ಹೃದಯಗಳನ್ನು ಈ ಘಟನಾವಳಿಗಳು ಇನ್ನಿಲ್ಲದಂತೆ ಗಾಸಿ ಮಾಡಿವೆ.

'ಗೆಸ್ಟ್' (ಅತಿಥಿ) ಕವಿತೆಯ ಭಿತ್ತಿಯಲ್ಲಿ ಸ್ವತಂತ್ರ ಅಸ್ಸಾಂ ಆಗಬೇಕೆನ್ನುವ ಸೈನ್ಯದ ಹೋರಾಟ ಇದೆ. 'ಭಯೋತ್ಪಾದಕರನ್ನು ಹೊರಗಟ್ಟುತ್ತೇವೆ' ಎನ್ನುವ ಹೆಸರಿನಲ್ಲಿ ಭಾರತೀಯ ಸೇನೆಯು ಸಾಮಾನ್ಯ ನಾಗರಿಕರ ಮೇಲೆ ಎಸಗಿದ ಘೋರ ಕೃತ್ಯಗಳು, ಅನಂತರದಲ್ಲಿ ನಮ್ಮ ಗಮನಕ್ಕೆ ಬಂದ ಸಾಮೂಹಿಕ



ಗೋರಿಗಳ ಚಿತ್ರ... ಅಸ್ಸಾಂ ರಾಜ್ಯವನ್ನು ಭೀಕರ ಅನುಭವಗಳಿಂದ ಗದ್ಗದಿಸುವಂತೆ ಮಾಡಿದೆ. ಈ ಭೀತಿ, ಜಿಗುಪ್ಸೆ, ಅನಿಶ್ಚಿತತೆ ನನ್ನ ಕವಿತೆಯನ್ನು ಕಾಪಿಟ್ಟಿವೆ. ರಾಜಕೀಯ ಅಭದ್ರತೆ, ಅತಿ ರಾಷ್ಟ್ರೀಯತೆ ಜೊತೆಗೆ ಅತಿ ಪ್ರಾದೇಶಿಕ ಆಕ್ರಮಣ, ಆಂಗ್ಲಮಾಧ್ಯಮ ಕಲಿಕೆಯ ಕುರಿತಾಗಿ ಇರುವ ಅತಿ ಮೋಹದಂತಹ ಸಂಗತಿಗಳು ಜನಾಂಗಿಕ ಭಾಷೆ ಮತ್ತು ಭಾರತೀಯ ಭಾಷೆಗಳಿಗೆ ಗಂಭೀರ ಆತಂಕವನ್ನು ಒಡ್ಡುತ್ತಿವೆ. ಈ ವಿಷಯಗಳು ನಮ್ಮ ದಾರಿಗಳನ್ನು ಹೊರೆಯಿಂದ ದಣಿವುಗೊಳಿಸುತ್ತವೆ.

◆ **ನೀವು ಕವಿತೆಗಳ ಜೊತೆಗೆ ಕಾದಂಬರಿಯನ್ನೂ ಬರೆದಿದ್ದೀರಿ. ಈ ಪ್ರಕಾರಗಳಿಗೆ ಅವುಗಳದ್ದೇ**